**ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಕುಲಪತಿಗಳ ಸಭಾಂಗಣದಲ್ಲಿ ದಿನಾಂಕ 26-3-2011 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ತೃತೀಯ ಸಭೆಯ ನಡುವಳಿಗಳು:**

**ಉಪಸ್ಥಿತರಿದ್ದ ಸದಸ್ಯರು:**

| | | | |
|---|---|---|---|
| 1 | ಡಾ. ಬಿ.ವಿ. ಪಾಟೀಲ | ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2 | ಡಾ. ಬಾಬು ರಾವ್ ಮುಡಬಿ | ಕೃಷಿ ಆಯುಕ್ತರು | ಸದಸ್ಯರು |
| 3 | ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೆದಾರ | ಮಾನ್ಯ ವಿಧಾನಸಭಾ ಸದಸ್ಯರು, ಅಫ್ಜಲಪುರ | ಸದಸ್ಯರು |
| 4 | ಶ್ರೀ ಎಂ.ಎಸ್. ಸೋಮಲಿಂಗಪ್ಪ | ಮಾನ್ಯ ವಿಧಾನಸಭಾ ಸದಸ್ಯರು, ಸಿರಗುಪ್ಪ | ಸದಸ್ಯರು |
| 5 | ಶ್ರೀ ಅಲ್ಲಮಪ್ರಭು ಪಾಟೀಲ | ಮಾನ್ಯ ವಿಧಾನಪರಿಷತ್ ಸದಸ್ಯರು, ಗುಲಬರ್ಗಾ | ಸದಸ್ಯರು |
| 6 | ಶ್ರೀ ಭೋಜನಗೌಡ | ಪ್ರಗತಿಪರ ರೈತರು, ಹೊಸಪೇಟೆ | ಸದಸ್ಯರು |
| 7 | ಶ್ರೀ ಶಂಕರಗೌಡ ಹರವಿ | ಪ್ರಗತಿಪರ ರೈತರು, ಹರವಿ | ಸದಸ್ಯರು |
| 8 | ಶ್ರೀ ವೆಂಕನಗೌಡ ಮಲ್ಕಾಪುರ | ಪ್ರಗತಿಪರ ರೈತರು, ರಾಯಚೂರು | ಸದಸ್ಯರು |
| 9 | ಶ್ರೀ ಶಿವಪ್ಪ ಬಿ. ಬಲ್ಲಿದವ | ಪ್ರಗತಿಪರ ರೈತರು, ಕೋತಿಗುಡ್ಡ | ಸದಸ್ಯರು |
| 10 | ಶ್ರೀ ಹನುಮೇಶ ನಾಯಕ | ಪ್ರಗತಿಪರ ರೈತರು, ಹುಲಿಹೈದರ್ | ಸದಸ್ಯರು |
| 11 | ಡಾ. ಚಲ್ಲಯ್ಯ | ಪ್ರಖ್ಯಾತ ಶಿಕ್ಷಣ ತಜ್ಞರು, ಬೆಂಗಳೂರು | ಸದಸ್ಯರು |
| 12 | ಶ್ರೀ ಬಸವರಾಜ ಪಾಟೀಲ ಇಟಗಿ | ಕೃಷಿ ಕೈಗಾರಿಕೋದ್ಯಮಿ, ಇಟಗಿ | ಸದಸ್ಯರು |
| 13 | ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ | ಸಮಾಜ ಸೇವಕರು, ಕನ್ನಂಗಿ | ಸದಸ್ಯರು |
| 14 | ಶ್ರೀ ಜಿ. ತಿಮ್ಮನಗೌಡ ಪಾಟೀಲ್ | ಕೃಷಿ ಪದವೀಧರ, ಮಸ್ಕಿ | ಸದಸ್ಯರು |
| 15 | ಡಾ. ಎಸ್.ಜಿ. ಪಾಟೀಲ | ಶಿಕ್ಷಣ ನಿರ್ದೇಶಕರು | ಸದಸ್ಯರು |
| 16 | ಡಾ. ಪಿ. ಬಾಲಕೃಷ್ಣನ್ | ಕುಲಸಚಿವರು | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ತೃತೀಯ ಸಭೆಗೆ ಸರ್ವಸದಸ್ಯರನ್ನು ಸ್ವಾಗತಿಸಿದರು ಹಾಗೂ ಹೊಸ ಸದಸ್ಯರುಗಳಿಗೆ ಹೂಗುಚ್ಛವನ್ನು ನೀಡುತ್ತಾ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಅಜೆಂಡಾ ಐಟಂವಾರು ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಇತ್ತೀಚಿನ ಕೃಷಿ ಮೇಳದ ಸಂದರ್ಭದಲ್ಲಿ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ಕೃಷಿ ಸಂಶೋಧನಾ ಕೇಂದ್ರದ ಡೇರಿ ವಿಭಾಗದ ತಪಾಸಣೆ ಮಾಡಿದ್ದು. ದನಕರುಗಳ ಸಂರಕ್ಷಣೆ ಕುರಿತು ಕೈಗೊಂಡ ಕ್ರಮದ ಬಗ್ಗೆ ಮಾನ್ಯ ಸದಸ್ಯರಾದ ಡಾ. ಚಲ್ಲಯ್ಯ ಅವರು ತಿಳಿಯಪಡಿಸಲು ಬಯಸಿದರು. ಈಗ ಡೇರಿ ವಿಭಾಗದ ಸ್ಥಿತಿಯು ಗಣನೀಯವಾಗಿ ಸುಧಾರಿಸಿದ್ದು ಸದಸ್ಯರುಗಳು ಯಾವಾಗಲಾದರೂ ಭೇಟಿ ನೀಡಬಹುದೆಂದು ಅಧ್ಯಕ್ಷರು ತಿಳಿಸಿದರು ಹಾಗೂ ಈ ಉದ್ದೇಶಕ್ಕಾಗಿ ಒಂದು ಸಮಿತಿಯನ್ನು ರಚಿಸಿದ್ದು, ಅದರ ವರದಿ ಬಂದ ತಕ್ಷಣ ತಪ್ಪಿತಸ್ಥರುಗಳ ಮೇಲೆ ಕ್ರಮಕೈಗೊಳ್ಳಲಾಗುವುದು.

ಮಾನ್ಯ ಸದಸ್ಯರಾದ ಡಾ. ಚಲ್ಲಯ್ಯ ಅವರು ವ್ಯವಸ್ಥಾಪನಾ ಮಂಡಳಿಯ ಗಮನಕ್ಕೆ ತರದೇ ನೇಮಕಾತಿಗಾಗಿ ಜಾಹಿರಾತು ಹೊರಡಿಸಲಾಗಿದೆ ಎಂಬ ಟಿಪ್ಪಣಿಗೆ, ಅಧ್ಯಕ್ಷರು ಉತ್ತರಿಸುತ್ತಾ ಈ ವಿಷಯವನ್ನು ವ್ಯವಸ್ಥಾಪನಾ ಮಂಡಳಿಯ ಹಿಂದಿನ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಿ, ಸರಕಾರದ ಅನುಮತಿ ಪಡೆದ ನಂತರವೇ ನೇಮಕಾತಿಗಾಗಿ ಜಾಹಿರಾತು ಹೊರಡಿಸಲಾಗಿದೆಯೆಂದು ತಿಳಿಸಿದರು. ಆದರೂ ಕೂಡಾ ಮುಂದೆ ಬರುವ ನೇಮಕಗಳನ್ನು ಮಂಡಳಿಯ ಗಮನಕ್ಕೆ ತಂದು ಜಾಹಿರಾತು ಹೊರಡಿಸಲಾಗುವುದು ಎಂದು ತಿಳಿಸಿದರು. ಸಹ-ಪ್ರಾಧ್ಯಾಪಕರ ಪರಿಷ್ಕೃತ ವೇತನ ಕುರಿತಾದ ಸದರಿ ಸದಸ್ಯರ ಮತ್ತೊಂದು ಪ್ರಶ್ನೆಗೆ, ವೇತನ ನಿಗದಿಯನ್ನು ಯುಜಿಸಿ/ಐಸಿಎಆರ್ ನಿಯಮಾವಳಿಗಳನುಸಾರ ಹಾಗೂ ಕರ್ನಾಟಕ ಸರಕಾರದ ಆದೇಶಗಳನ್ವಯ ಮಾಡಲಾಗಿದೆಯೆಂದು ತಿಳಿಯಪಡಿಸಲಾಯಿತು.

ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿಯ ಇತ್ತೀಚಿನ ಬೆಳವಣಿಗೆಗಳ ಪತ್ರದ ಬಗ್ಗೆ ಮಾನ್ಯ ಸದಸ್ಯರುಗಳ ತಪ್ಪು ತಿಳುವಳಿಕೆಗಳ ಕುರಿತಾಗಿ ಅಧ್ಯಕ್ಷರು ಸ್ಪಷ್ಟೀಕರಣ ನೀಡುತ್ತಾ, ಮಾನ್ಯ ಸದಸ್ಯರುಗಳು ಸಂಸ್ಥೆಗಳಿಗೆ ಮತ್ತು ಸಂಶೋಧನಾ ಕೇಂದ್ರಗಳಿಗೆ ಒಬ್ಬೊಬ್ಬರಾಗಿ ಭೇಟಿ ನೀಡಲು ಸ್ವತಂತ್ರರಾಗಿರುತ್ತಾರೆ ಹಾಗೂ ತಂಡ–ತಂಡವಾಗಿ ಭೇಟಿ ನೀಡಲು ಬಯಸಿದಲ್ಲಿ ವಿಶ್ವವಿದ್ಯಾಲಯದ ವಾಹನವನ್ನು ಬಳಸಬಹುದು ಮತ್ತು ಸಂಶೋಧನಾ ಕೇಂದ್ರಗಳನ್ನು ಸುಧಾರಿಸಲು ಅಧ್ಯಕ್ಷರಿಗೆ ಸಲಹೆಗಳನ್ನು ಕೊಡಲು ತಿಳಿಸಿದರು. ಮೇಲಿನ ವಿಷಯವನ್ನು ದೀರ್ಘವಾಗಿ ಚರ್ಚಿಸಿದ ನಂತರ, ವಿಶ್ವವಿದ್ಯಾಲಯದ ಅಧಿಕಾರಿಗಳ ಸಮಾಲೋಚನೆಯೊಂದಿಗೆ ಮಾನ್ಯ ಕುಲಪತಿಗಳವರು ಡಾ. ಎಸ್.ಜಿ. ಪಾಟೀಲ ಅವರನ್ನು ಪ್ರಭಾರಿ ಶಿಕ್ಷಣ ನಿರ್ದೇಶಕರನ್ನಾಗಿ ನೇಮಿಸಿ ಕೈಗೊಂಡ ಆಡಳಿತಾತ್ಮಕ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಸಮರ್ಥನೆ ನೀಡಿತು.

| | |
|---|---|
| **ಅನುಕ್ರಮ ಸಂ: 1** | **ದಿನಾಂಕ 2–12–2010 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ದ್ವಿತೀಯ ಸಭೆಯ ನಡುವಳಿಗಳನ್ನು ಮತ್ತು ಅವುಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ಸ್ಥಿರೀಕರಿಸುವುದು** |

**I. ದಿನಾಂಕ 13–8–2010 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಪ್ರಥಮ ಸಭೆಯ ನಡುವಳಿಗಳಲ್ಲಿ ಸ್ಥಿರೀಕರಿಸಿ ಶಿಫಾರಸ್ಸು ಮಾಡಿದ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡುವುದು.**

**ಅನುಕ್ರಮ ಸಂ: 11 : ವಿಶೇಷ ಘಟಕ ಯೋಜನೆ ಅಡಿಯಲ್ಲಿ ಹಸುಗಳನ್ನು ಖರೀದಿಸಲು ಹಣಕಾಸು ಒಪ್ಪಿಗೆ ಕುರಿತು**
**ಅನುಕ್ರಮ ಸಂ: 12 : ಗಿರಿಜನ ಉಪ ಯೋಜನೆ ಅಡಿಯಲ್ಲಿ ಹಸುಗಳನ್ನು ಖರೀದಿಸಲು ಹಣಕಾಸು ಒಪ್ಪಿಗೆ ಕುರಿತು**

ಮೇಲೆ ತಿಳಿಸಿದ ಎಸ್‌ಸಿಪಿ ಮತ್ತು ಎಸ್‌ಟಿಪಿ ಯೋಜನೆಗಳಡಿಯಲ್ಲಿ ಆಕಳುಗಳನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿವಿಧ ವರ್ಗಗಳ ಫಲಾನುಭವಿಗಳನ್ನು ಮತ್ತು ಅವರುಗಳ ಜನಸಂಖ್ಯೆಯನ್ನು ಆಧರಿಸಿ ವಿತರಿಸಲು ಮಾನ್ಯ ಸದಸ್ಯರುಗಳಾದ ಶ್ರೀ ಅಲ್ಲಮಪ್ರಭು ಪಾಟೀಲ ಹಾಗೂ ಶ್ರೀ ಎಂ.ವಿ. ಗುತ್ತೇದಾರ ಇವರುಗಳು ಸಲಹೆ ನೀಡಿದರು.

ದಿನಾಂಕ 13–8–2010 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಪ್ರಥಮ ಸಭೆಯ ನಡುವಳಿಗಳಲ್ಲಿ ಸ್ಥಿರೀಕರಿಸಿ ಶಿಫಾರಸ್ಸು ಮಾಡಿದ ಪ್ರಕಾರ ಕೈಗೊಂಡ ಕ್ರಮಗಳನ್ನು ವ್ಯವಸ್ಥಾಪನಾ ಮಂಡಳಿಯು ಓದಿ ಅನುಮೋದನೆ ನೀಡಿತು.

**II. ದಿನಾಂಕ 2–12–2010 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ದ್ವಿತೀಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು ಮತ್ತು ಸದರಿ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡುವುದು.**

**ಅನುಕ್ರಮ ಸಂ: 2: ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಥಮ ಘಟಿಕೋತ್ಸವಕ್ಕೆ ಅತಿಥಿಗಳನ್ನು ನಿಗದಿಪಡಿಸುವ ಕುರಿತು.**

ವಿವಿಐಪಿ ಗಳಾದ ಭಾರತದ ರಾಷ್ಟ್ರಪತಿಗಳು ಅಥವ ಪ್ರಧಾನ ಮಂತ್ರಿಗಳವರನ್ನು ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಆಹ್ವಾನಿಸಲು ಮಾನ್ಯ ಸದಸ್ಯರಾದ ಡಾ. ಚಲ್ಲಯ್ಯ ಅವರು ನೀಡಿದ ಸಲಹೆಯು ಸೂಕ್ತವಾಗಿದ್ದು, ಮುಂದಿನ ದಿನಗಳಲ್ಲಿ ಇದನ್ನು ಪರಿಗಣಿಸಲಾಗುವುದೆಂದು ತಿಳಿಯಪಡಿಸಲಾಯಿತು.

ದಿನಾಂಕ 2–12–2010 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ದ್ವಿತೀಯ ಸಭೆಯ ನಡುವಳಿಗಳನ್ನು ವ್ಯವಸ್ಥಾಪನಾ ಮಂಡಳಿಯು ಓದಿ ಸ್ಥಿರೀಕರಿಸಿತು ಮತ್ತು ಸದರಿ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಸಮರ್ಥನೆ ನೀಡಿತು.

ದಿನಾಂಕ 2-12-2010 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ದ್ವಿತೀಯ ಸಭೆಯ ನಡುವಳಿಗಳನ್ನು ವ್ಯವಸ್ಥಾಪನಾ ಮಂಡಳಿಯು ಓದಿ ಸ್ಥಿರೀಕರಿಸಿತು ಮತ್ತು ಸದರಿ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಸಮರ್ಥನೆ ನೀಡಿತು.

| | |
|---|---|
| ಅನುಕ್ರಮ ಸಂ: 2 | ಅರ್ಹ ಅಭ್ಯರ್ಥಿಗಳಿಗೆ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಥಮ ಘಟಿಕೋತ್ಸವದಲ್ಲಿ ಸ್ನಾತಕ ಪದವಿಗಳ ಪ್ರದಾನ ಕುರಿತು. |

ಠರಾವು:

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಐಟಂ ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು, ಕೃವಿವಿ ರಾಯಚೂರು)

| | |
|---|---|
| ಅನುಕ್ರಮ ಸಂ: 3 | ಅರ್ಹ ಅಭ್ಯರ್ಥಿಗಳಿಗೆ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಥಮ ಘಟಿಕೋತ್ಸವದಲ್ಲಿ ಸ್ನಾತಕೋತ್ತರ ಪದವಿಗಳ ಪ್ರದಾನ ಕುರಿತು. |

ಠರಾವು:

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಐಟಂ ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು, ಕೃವಿವಿ ರಾಯಚೂರು)

| | |
|---|---|
| ಅನುಕ್ರಮ ಸಂ: 4 | ಬಂಗಾರದ ಪದಕ, ನಗದು ಪ್ರಶಸ್ತಿ / ಬಹುಮಾನಗಳನ್ನು ಸ್ಥಾಪಿಸುವುದು ಹಾಗೂ ಅವುಗಳನ್ನು ಅರ್ಹ ಅಭ್ಯರ್ಥಿಗಳಿಗೆ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಥಮ ಘಟಿಕೋತ್ಸವದಲ್ಲಿ ಕೊಡುವ ಕುರಿತು. |

ಠರಾವು:

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಐಟಂ ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು, ಕೃವಿವಿ ರಾಯಚೂರು)

| | |
|---|---|
| ಅನುಕ್ರಮ ಸಂ: 5 | ಅತ್ಯುತ್ತಮ ಬೋಧಕರು / ವಿಜ್ಞಾನಿಗಳು ಮತ್ತು ಸೇವಾ ಸಿಬ್ಬಂದಿ / ಸಂಶೋಧನಾ ಕೇಂದ್ರ ಇವರುಗಳಿಗೆ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಶಸ್ತಿಗಳನ್ನು ಸ್ಥಾಪಿಸುವುದು ಹಾಗೂ ಸಂಶೋಧನಾ ಯೋಜನೆಗಳನ್ನು ಪಡೆಯುವ ವಿಜ್ಞಾನಿಗಳಿಗೆ ಪ್ರೋತ್ಸಾಹ ಧನ ಪ್ರಶಸ್ತಿಗಳನ್ನು ಸ್ಥಾಪಿಸುವುದು |

ಠರಾವು:

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಐಟಂ ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು, ಕೃವಿವಿ ರಾಯಚೂರು)

| | |
|---|---|
| ಅನುಕ್ರಮ ಸಂ: 6 | ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗಾಗಿ ಮಾರ್ಪಡಿಸಿದ 2010-'11 ನೇ ಸಾಲಿನ ಶೈಕ್ಷಣಿಕ ಮಾಹಿತಿ ಹಾಗೂ ನಿಯಮಾವಳಿಗಳ ಕುರಿತು. |

ಠರಾವು:

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಐಟಂ ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು/ಡೀನ್(ಪಿಜಿಎಸ್), ಕೃವಿವಿ ರಾಯಚೂರು)

| | |
|---|---|
| ಅನುಕ್ರಮ ಸಂ: 7 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಡಿಪ್ಲೋಮಾ / ಸರ್ಟಿಫಿಕೇಟ್ ಕೋರ್ಸ್‌ಗಳಿಗಾಗಿ ಶೈಕ್ಷಣಿಕ ನಿಯಮಾವಳಿಗಳನ್ನು ರೂಪಿಸುವ ಕುರಿತು. |

ಕೆಳ ಹಂತದ ಡಿಪ್ಲೋಮಾ / ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಉನ್ನತ ಮಟ್ಟದ ಕೃಷಿ ಶಿಕ್ಷಣ ನೀಡುವ ಸಂಸ್ಥೆಯಾದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಪ್ರಾರಂಭಿಸುವುದರಿಂದ ವಿಶ್ವವಿದ್ಯಾಲಯದ ಘನತೆ / ಸ್ವರೂಪಕ್ಕೆ ಹಾಗೂ ಶೈಕ್ಷಣಿಕ ಗುಣಮಟ್ಟದ ಮೇಲೆ ಪ್ರಭಾವ ಬೀರುವುದಾಗಿ ಮಾನ್ಯ ಸದಸ್ಯರಾದ ಶ್ರೀ ಅಲ್ಲಮಪ್ರಭು ಪಾಟೀಲ ಅವರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮಾನ್ಯ ಸದಸ್ಯರಾದ ಡಾ. ಬಾಬು ರಾವ್ ಮುಡಬಿ ಅವರು ಮಧ್ಯಮ ವರ್ಗದ ಕೃಷಿ ಕ್ಷೇತ್ರದ ವಲಯಗಳಲ್ಲಿ ಮಾನವ ಸಂಪನ್ಮೂಲದ ಕೊರತೆಯಿರುವುದರಿಂದ, ಮಹಾರಾಷ್ಟ್ರ ರಾಜ್ಯದಲ್ಲಿ ಯಶಸ್ವಿಯಾಗಿರುವ ಮಾದರಿಯಲ್ಲೇ ಅಂತಹ ಜನರಿಗೆ ಕೃಷಿ ಅಭಿವೃದ್ಧಿಯ ಕುರಿತು ತರಬೇತಿ ನೀಡುವ ಅವಶ್ಯಕತೆಯಿದೆಯೆಂದು ತಿಳಿಸಿದರು. ಗ್ರಾಮೀಣ ಜನತೆಗೆ ಕೃಷಿ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಕೌಶಲ್ಯಗಳನ್ನು ನೀಡಲು, ಲಾಭದಾಯಕ ಉದ್ಯೋಗ ನೀಡಲು ಮತ್ತು ಉತ್ತಮ ಆದಾಯ ಪಡೆಯಲು ಶಿಕ್ಷಣ ನೀಡುವ ಕುರಿತು ಸರಕಾರದಿಂದ ಪ್ರಸ್ತಾವನೆ ಬಂದಿರುವುದಾಗಿ ಮಾನ್ಯ ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ ಅವರು "ಗೃಹ-ಅಲಂಕಾರ, ಕುಂಡಗಳ ಬದಲಾವಣೆ, ಪುಷ್ಪಗಳ-ಜೋಡಣೆ" ಇತ್ಯಾದಿ ಕೋರ್ಸ್‌ಗಳನ್ನು ಸೇರಿಸಲು ಸಲಹೆ ನೀಡಿದರು, ಹಾಗೂ ಇದರಿಂದಾಗಿ ಗ್ರಾಮೀಣ ಜನತೆಯ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು, ಈ ಉದ್ದೇಶಕ್ಕಾಗಿ ಪರಿಣಿತರನ್ನು ಆಹ್ವಾನಿಸಬಹುದೆಂದು ತಿಳಿಯಪಡಿಸಿದರು. ಡಿಪ್ಲೋಮಾ / ಸರ್ಟಿಫಿಕೇಟ್ ಕೋರ್ಸ್‌ಗಳಲ್ಲಿ ತರಬೇತಿ ಪಡೆದ ಯುವಕರು ತಮ್ಮ ವೃತ್ತಿಯನ್ನು ಸುಧಾರಿಸಿಕೊಳ್ಳುವಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಪಡೆಯಲು ಇರುವ ಸಾಧ್ಯಾ-ಸಾಧ್ಯತೆಗಳನ್ನು ಪರೀಕ್ಷಿಸಲು ಮಾನ್ಯ ಸದಸ್ಯರಾದ ಶ್ರೀ ಶಂಕರಗೌಡ ಹರವಿ ಅವರು ವಿನಂತಿಸಿಕೊಂಡರು. ಡಿಪ್ಲೋಮಾ / ಸರ್ಟಿಫಿಕೇಟ್ ಕೋರ್ಸ್‌ಗಳಲ್ಲಿ ತರಬೇತಿ ಪಡೆದ ಪ್ರಥಮ ತಂಡವು ಹೊರಬಂದ ಮೇಲೆ ಅವರ ಗುಣಮಟ್ಟವನ್ನು ಪರಿಗಣಿಸಿದ ನಂತರವೇ ಈ ಕುರಿತು ಪರಿಶೀಲಿಸಬಹುದೆಂದು ತಿಳಿಸುತ್ತಾ ಅಲ್ಲಿಯವರೆಗೆ ಪ್ರತೀಕ್ಷಿಸಲು ಕೃಷಿ ಆಯುಕ್ತರು ಸಲಹೆ ನೀಡಿದರು. ಸರಕಾರವು ಪ್ರಸ್ತಾಪಿಸಿದ ಡಿಪ್ಲೋಮಾ / ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗಲು, ಹೆಚ್ಚಿನ ಧನಸಹಾಯವನ್ನು ಸರಕಾರದಿಂದ ಪಡೆಯುವಲ್ಲಿ ಮಾನ್ಯ ವಿಧಾನಸಭಾ ಸದಸ್ಯರು, ಮಾನ್ಯ ವಿಧಾನಪರಿಷತ್ ಸದಸ್ಯರು ಹಾಗೂ ಇತರೇ ಸದಸ್ಯರು ಪ್ರಯತ್ನಿಸಬೇಕೆಂದು ಸಲಹೆ ನೀಡಲಾಯಿತು.

ರಾಸಾಯನಿಕಗಳ ಪರೀಕ್ಷಣ ಕೇಂದ್ರವನ್ನು ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲು ಮಾನ್ಯ ಸದಸ್ಯರಾದ ಶ್ರೀ ಶಂಕರಗೌಡ ಹರವಿಯವರು ಸಲಹೆ ನೀಡಿದರು. ಸಾಮಾನ್ಯವಾಗಿ ರಾಸಾಯನಿಕಗಳ ಪರೀಕ್ಷಣಾ ಕಾರ್ಯಗಳನ್ನು ಕರ್ನಾಟಕ ಸರಕಾರದ ಕೃಷಿ ಇಲಾಖೆಯು ಕೈಗೊಳ್ಳುತ್ತಿದ್ದು, ಅವುಗಳನ್ನು ಸೂಕ್ತ ಪ್ರಾಧಿಕಾರವೆಂದು ಗುರುತಿಸಲ್ಪಟ್ಟಿರುತ್ತವೆಯೆಂದು ಅಧ್ಯಕ್ಷರು ತಿಳಿಸಿದರು. ಮುಂದುವರೆದು ಮಾನ್ಯ ಸದಸ್ಯರಾದ ಶ್ರೀ ಜಿ. ತಿಮ್ಮನಗೌಡ ಪಾಟೀಲ್‌ರವರು ಈ ಭಾಗವು ನೀರಾವರಿಯಿಂದ ಕೂಡಿರುವುದರಿಂದ, ಈ ಕ್ಷೇತ್ರಕ್ಕೆ ಅಂತಹ ಒಂದು ಕೇಂದ್ರವನ್ನು ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಸ್ಥಾಪಿಸಲು ಕೃಷಿ ಆಯುಕ್ತರನ್ನು ವಿನಂತಿಸಿಕೊಂಡರು.

**ಠರಾವು:**

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಐಟಂ ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು/ಡೀನ್(ಪಿಜಿಎಸ್), ಕೃವಿವಿ ರಾಯಚೂರು)

| | |
|---|---|
| **ಅನುಕ್ರಮ ಸಂ: 8** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಖಾಯಂ ಸಿಬ್ಬಂದಿಯವರಿಗೆ ಕೊಡುವ ಮನೆ ಕಟ್ಟಲು ಸಾಲ / ಮನೆ ಖರೀದಿಸಲು ಸಾಲ / ನಿವೇಶನ ಖರೀದಿಸಲು ಸಾಲಗಳ ಪ್ರಮಾಣವನ್ನು ಹೆಚ್ಚಿಸುವ ಕುರಿತು.** |

ವಿಶ್ವವಿದ್ಯಾಲಯದ ಹೆಚ್ಚುವರಿಯಾಗಿ ಉಳಿದ ಹಣವನ್ನು ಆರ್.ಡಿ.ಸಿ.ಸಿ. ಬ್ಯಾಂಕ್ ಹಾಗೂ ಗಂಗಾವತಿಯಲ್ಲಿಯ ಬ್ಯಾಂಕುಗಳಲ್ಲಿ ರೈತರ ಉಪಯೋಗಕ್ಕಾಗಿ ವಿನಿಯೋಗಿಸಲು ಮಾನ್ಯ ಸದಸ್ಯರಾದ ಶ್ರೀ ಶಂಕರಗೌಡ ಹರವಿ ಮತ್ತು ಶ್ರೀ ಹನುಮೇಶ ನಾಯಕ ಅವರುಗಳು ವಿನಂತಿಸಿಕೊಂಡರು. ಕೇವಲ ಶೆಡ್ಯೂಲ್ಡ್ ಬ್ಯಾಂಕ್‌ಗಳಲ್ಲಿ ಮಾತ್ರ ವಿಶ್ವವಿದ್ಯಾಲಯದ ಹೆಚ್ಚುವರಿಯಾಗಿ ಉಳಿದ ಹಣವನ್ನು ವಿನಿಯೋಗಿಸಲಾಗುವುದೆಂದು ಮಾನ್ಯ ಅಧ್ಯಕ್ಷರು ಘನ ವೇದಿಕೆಯ ಗಮನಕ್ಕೆತಂದರು.

ಠರಾವು:

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಐಟಂ ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ ರಾಯಚೂರು)

| ಅನುಕ್ರಮ ಸಂ: 9 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಖಾಯಂ ಸಿಬ್ಬಂದಿಯವರಿಗೆ ಕೊಡುವ ಮನೆ ಕಟ್ಟಲು / ಮನೆ ಖರೀದಿಸಲು / ನಿವೇಶನ ಖರೀದಿಸಲು / ಮೋಟಾರ್ ಸೈಕಲ್ ಕೊಳ್ಳಲು ನೀಡುವ ಮುಂಗಡ ಹಣಕ್ಕೆ ವಿಧಿಸುವ ಬಡ್ಡಿ ದರವನ್ನು ಪರಿಷ್ಕರಿಸುವ ಕುರಿತು.** |
|---|---|

ಠರಾವು:

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಐಟಂ ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ ರಾಯಚೂರು)

| ಅನುಕ್ರಮ ಸಂ: 10 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಡಳಿತ ಭವನದ ಕಟ್ಟಡ ನಿರ್ಮಾಣ – ಅನುಮೋದನೆ ಕುರಿತು.** |
|---|---|

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಡಳಿತ ಭವನವು ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿಯೇ ವೈಶಿಷ್ಟಪೂರ್ಣವಾಗಿರತಕ್ಕದ್ದು, ಹೀಗಾಗಿ ಆರ್ಕಿಟೆಕ್ಟ್‌ರವರಿಗೆ ಇನ್ನೂ 2–3 ಉತ್ತಮ ಡಿಸೈನಗಳುಳ್ಳ ಮುಂಭಾಗದ ಚಿತ್ರಗಳನ್ನು ತಂದು ಮುಂದಿನ ಸಭೆಯಲ್ಲಿ ಮಂಡಿಸಿದರೆ ಅವುಗಳಲ್ಲಿ ಒಂದನ್ನು ಆಯ್ಕೆ ಮಾಡಬಹುದೆಂದು ಮಾನ್ಯ ಸದಸ್ಯರಾದ ಡಾ. ಬಾಬು ರಾವ್ ಮುಡಬಿ ಮತ್ತು ಶ್ರೀ ಅಲ್ಲಮಪ್ರಭು ಪಾಟೀಲ ಅವರುಗಳು ಸಲಹೆ ನೀಡಿದರು. ಪ್ರಸ್ತಾವಿತ ಹೊಸ ಆಡಳಿತ ಭವನದಲ್ಲಿ ವಿಶ್ರಾಂತಿ ಗೃಹ, ಭೋಜನದ ಕೋಣೆ ಮತ್ತು ಸಭೆಯ–ಪೂರ್ವ ಚರ್ಚೆಗಾಗಿ ಕೋಣೆ (ವ್ಯವಸ್ಥಾಪನಾ ಮಂಡಳಿಯ ಸಭೆಗೆ ಹೋಗುವ ಮುಂಚೆ) ಯನ್ನು ವ್ಯವಸ್ಥಾಪನಾ ಮಂಡಳಿಯ ಸದಸ್ಯರಿಗಾಗಿ ಇರುವಂತೆ ಸೇರಿಸಲು ಮಾನ್ಯ ಸದಸ್ಯರಾದ ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ ಅವರು ಸಲಹೆ ನೀಡಿದರು.

ನಂಜುಂಡಯ್ಯ ಸಮಿತಿ ವರದಿಯಂತೆ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಡಳಿತ ಭವನವನ್ನು ಕಟ್ಟಲು ಎಸ್.ಡಿ.ಪಿ. / ಆರ್.ಕೆ.ವಿ.ವೈ. ಅಥವಾ ಇತರೇ ಮೂಲಗಳಿಂದ ಧನಸಹಾಯ ನೀಡಲು ಮಾನ್ಯ ಅಧ್ಯಕ್ಷರು ಸರಕಾರಕ್ಕೆ ಪತ್ರ ಬರೆಯುವಂತೆ ಮಾನ್ಯ ಸದಸ್ಯರುಗಳಾದ ಡಾ. ಬಾಬು ರಾವ್ ಮುಡಬಿ, ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ, ಶ್ರೀ ಬಸವರಾಜ ಪಾಟೀಲ ಇಟಗಿ ಹಾಗೂ ಶ್ರೀ ಜಿ. ತಿಮ್ಮನಗೌಡ ಪಾಟೀಲ್ ಅವರುಗಳು ವಿನಂತಿಸಿಕೊಂಡರು. ಇದಕ್ಕೆ ಸಂಬಂಧಿಸಿದಂತೆ, ಮಾನ್ಯ ಸದಸ್ಯರುಗಳು ದಿನಾಂಕ 9–5–2011 ರಂದು ಬೆಂಗಳೂರಿನಲ್ಲಿ ಜರುಗಿಸಲು ಪ್ರಸ್ತಾವಿಸಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ನಂತರ ಕೃಷಿ ಸಚಿವರು ಹಾಗೂ ಮುಖ್ಯಮಂತ್ರಿಗಳವನ್ನು ಭೇಟಿ ಮಾಡಿ ಹೆಚ್ಚಿನ ಧನಸಹಾಯವನ್ನು ಒದಗಿಸುವಂತೆ ವಿನಂತಿಸಲು ತೀರ್ಮಾನಿಸಲಾಯಿತು.

ಠರಾವು:

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಈ ಕುರಿತು ಚರ್ಚಿಸಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಡಳಿತ ಭವನದ ಇನ್ನೂ 2–3 ಉತ್ತಮ ಡಿಸೈನಗಳುಳ್ಳ ಮುಂಭಾಗದ ಚಿತ್ರಗಳನ್ನು ಆರ್ಕಿಟೆಕ್ಟ್‌ರವರು ತಂದು ಮುಂದಿನ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲು ಸಲಹೆ ನೀಡಲಾಯಿತು.

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು, ಕೃವಿವಿ ರಾಯಚೂರು)

| | |
|---|---|
| ಅನುಕ್ರಮ ಸಂ: 11 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ವಿವಿಧ ವಿಷಯಗಳಲ್ಲಿ 2011–'12 ನೇ ಸಾಲಿನಿಂದ ಪಿ.ಎಚ್.ಡಿ. ಪದವಿಯ ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಕುರಿತು. |

ಠರಾವು:

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಐಟಂ ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು/ಡೀನ್(ಪಿಜಿಎಸ್), ಕೃವಿವಿ ರಾಯಚೂರು)

| | |
|---|---|
| ಅನುಕ್ರಮ ಸಂ: 12 | ಆರ್ಥಿಕ ವರ್ಷ 2010–'11 ರಲ್ಲಿ ಹಣಕಾಸಿನ ಆದಾಯ ಹಾಗೂ ಖರ್ಚಿನ ವಿವರ. |

ವಿಶ್ವವಿದ್ಯಾಲಯ ಎಲ್ಲಾ ಸಂಸ್ಥೆಗಳಿಗೆ / ಸಂಶೋಧನಾ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳನ್ನು ಸಮಾನವಾಗಿ ಹಂಚಿಕೆ ಮಾಡಲು ಮಾನ್ಯ ಸದಸ್ಯರಾದ ಶ್ರೀ ಅಲ್ಲಮಪ್ರಭು ಪಾಟೀಲ ಅವರು ಸಲಹೆ ನೀಡಿದರು.

ಠರಾವು:

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಐಟಂ ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ ರಾಯಚೂರು)

| | |
|---|---|
| ಅನುಕ್ರಮ ಸಂ: 13 | 2010–'11 ನೇ ಸಾಲಿನ ಆಯವ್ಯಯ (ಬಜೆಟ್) ವಿವರಗಳ ಕುರಿತು. |

ಠರಾವು:

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಐಟಂ ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ ರಾಯಚೂರು)

| | |
|---|---|
| ಅನುಕ್ರಮ ಸಂ: 14 | ಚಾಲ್ತಿಯಲ್ಲಿರುವ ಸಿವಿಲ್ ಮತ್ತು ಹೊಸ ಕಾಮಗಾರಿಗಳು |

ಮಾನ್ಯ ಸದಸ್ಯರಾದ ಶ್ರೀ ಅಲ್ಲಮಪ್ರಭು ಪಾಟೀಲ ಅವರು ರಾಯಚೂರು ಆವರಣದ ಸೌಂದರ್ಯೀಕರಣ ಹಾಗೂ ರಸ್ತೆಗಳ ಡಾಂಬರೀಕರಣಗೊಳಿಸಲು ಕ್ರಮಕೈಗೊಳ್ಳಬೇಕೆಂದು ಸಲಹೆ ನೀಡಿದರು. ಮಾನ್ಯ ಸದಸ್ಯರಾದ ಶ್ರೀ ಅಲ್ಲಮಪ್ರಭು ಪಾಟೀಲ ಹಾಗೂ ಶ್ರೀ ಬಸವರಾಜ ಪಾಟೀಲ ಇಟಗಿ ಅವರುಗಳು ಭೀಮರಾಯನಗುಡಿಯಲ್ಲಿ ಖಾಲಿ ಇರುವ ಕಾಡಾ ಮತ್ತು ಜಲಸಂಪನ್ಮೂಲ ಇಲಾಖೆಯ ವಸತಿಗೃಹಗಳನ್ನು ಪಡೆಯಲು ಜಲಸಂಪನ್ಮೂಲ / ಕಾಡಾ ಸಚಿವರಿಗೆ ಪತ್ರ ಬರೆಯಲು ಸಲಹೆ ನೀಡಿದರು. ಮಾನ್ಯ ಅಧ್ಯಕ್ಷರು ಈ ವಿಷಯದಲ್ಲಿ ಮಾನ್ಯ ಸದಸರುಗಳ ಸಹಾಯಕ್ಕಾಗಿ ವಿನಂತಿಸಿದರು. ಮಾನ್ಯ ಸದಸ್ಯರಾದ ಡಾ. ಬಾಬು ರಾವ್ ಮುಡಬಿ, ಶ್ರೀ ಅಲ್ಲಮಪ್ರಭು ಪಾಟೀಲ, ಶ್ರೀ ಜಿ. ತಿಮ್ಮನಗೌಡ ಪಾಟೀಲ್ ಹಾಗೂ ಶ್ರೀ ಬಸವರಾಜ ಪಾಟೀಲ ಇಟಗಿ ಅವರುಗಳು 2011–'12 ನೇ ಸಾಲಿನ ಶೈಕ್ಷಣಿಕ ವರ್ಷದಿಂದಲೇ ಗುಲಬರ್ಗಾದಲ್ಲಿ ಕೃಷಿ ಮಹಾವಿದ್ಯಾಲಯವನ್ನು ಲಭ್ಯವಿರುವ ಸೌಕರ್ಯಗಳಿಂದಲೇ ಪ್ರಾರಂಭಿಸಲು ಒತ್ತು ನೀಡಿದರು. ಮಾನ್ಯ ಸದಸ್ಯರುಗಳು ಅಭಿವೃದ್ಧಿ ಕಾರ್ಯಗಳನ್ನು ಎಲ್ಲಾ ಕೇಂದ್ರಗಳಲ್ಲೂ ಆದ್ಯತೆಯ ಮೇರೆಗೆ ಸೇರಿಸಿ ಕೈಗೊಳ್ಳಲು ಸಲಹೆ ನೀಡಿದರು.

**ತರಾವು:**

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಈ ಕುರಿತು ಚರ್ಚಿಸಿ ಅನುಮೋದನೆ ನೀಡಿತು ಮತ್ತು ಹೊಸ ಕಾಮಗಾರಿಗಳ ಯಾದಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ತಿಳಿಸಲಾಯಿತು.

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು, ಕೃವಿವಿ ರಾಯಚೂರು)

**ಅನುಕ್ರಮ ಸಂ: 15 ಉಪಕರಣಗಳು, ಪೀಠೋಪಕರಣಗಳು ಮತ್ತು ಇನ್ನಿತರ ವಸ್ತುಗಳ ಖರೀದಿ ಕುರಿತು**

ಮಾನ್ಯ ಸದಸ್ಯರಾದ ಡಾ. ಬಾಬು ರಾವ್ ಮುಡಬಿಯವರು, ಉಪಕರಣಗಳು, ಪೀಠೋಪಕರಣಗಳು ಮತ್ತು ಇನ್ನಿತರ ವಸ್ತುಗಳ ಖರೀದಿಗಾಗಿ ಇ-ಟೆಂಡರ್ ಪದ್ಧತಿಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿದಾಗ, ಮಾನ್ಯ ಅಧ್ಯಕ್ಷರು ಈಗಾಗಲೇ ಈ ಪದ್ಧತಿಯು ವಿಶ್ವವಿದ್ಯಾಲಯದಲ್ಲಿ ಚಾಲ್ತಿಯಲ್ಲಿದೆಯೆಂದು ಉತ್ತರ ನೀಡಿದರು. ಬಹಳಷ್ಟು ಸದಸ್ಯರು ಸದರಿ ಉಪಕರಣಗಳನ್ನು ಒಳ್ಳೇಯ ಹಾಗೂ ಪರಿಣಾಮಕಾರಿಯಾಗಿ ವಿಜ್ಞಾನಿಗಳು ಹಾಗೂ ವಿದ್ಯಾರ್ಥಿಗಳು ಉಪಯೋಗಿಸಿಕೊಳ್ಳಲು ಸಲಹೆ ನೀಡಿದರು.

**ತರಾವು:**

ಮಾನ್ಯ ವ್ಯವಸ್ಥಾಪನಾ ಮಂಡಳಿಯು ಐಟಂ ಚರ್ಚಿಸಿ ಅನುಮೋದನೆ ನೀಡಿತು.

(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು/ಸರಕು ಖರೀದಿ ಅಧಿಕಾರಿಗಳು, ಕೃವಿವಿ ರಾಯಚೂರು)

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

ಇತ್ತೀಚಿಗೆ ರಾಜ್ಯದ ಮೂರು ಕೃಷಿ ವಿಶ್ವವಿದ್ಯಾಲಯಗಳು ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯದ ಜಂಟಿ ಸಭೆಗಳಲ್ಲಿ ರಚಿಸಿದ ಕೃಷಿ ವಿಶ್ವವಿದ್ಯಾಲಯಗಳ ಪರಿನಿಯಮಗಳನ್ನು ಮಾನ್ಯ ಸದಸ್ಯರುಗಳು ಅವಲೋಕಿಸಲು ಅಧ್ಯಕ್ಷರು ವಿನಂತಿಕೊಂಡರು ಹಾಗೂ ಏನಾದರೂ ಸಲಹೆಗಳು ಇದ್ದಲ್ಲಿ ಅವುಗಳನ್ನು ದಿನಾಂಕ 15-4-2011 ರಂದು ಜರುಗುವ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಚರ್ಚಿಸಲಾಗುವುದು.

ಮಾನ್ಯ ಸದಸ್ಯರಾದ ಡಾ. ಚಲ್ಲಯ್ಯ ಅವರು ಸ್ಕೋರ್ ಕಾರ್ಡನ್ನು ಮುಂದಿನ ಸಲ ಪರಿಷ್ಕರಿಸುವಾಗ ಅದನ್ನು ಸುಧಾರಿಸಲು ಸಲಹೆ ನೀಡಿದರು. ಬಿ.ಎಸ್ಸಿ.(ಅಗ್ರಿ) ಹಾಗೂ ಎಂ.ಎಸ್ಸಿ.(ಅಗ್ರಿ) ಹೊಂದಿದ ಅಭ್ಯರ್ಥಿಗಳನ್ನು ಪ್ರಯೋಗ ಶಾಲ / ಕ್ಷೇತ್ರ ಸಹಾಯಕ ಹುದ್ದೆಗೆ ಪರಿಗಣಿಸಬಾರದೆಂದು ಅಭಿಪ್ರಾಯಪಟ್ಟರು, ಏಕೆಂದರೆ ಅದು ಎಸ್.ಎಸ್.ಎಲ್.ಸಿ. ಹಾಗೂ 3 ತಿಂಗಳ ಕೃಷಿ ತರಬೇತಿ ಅಥವ ಜೆ.ಒ.ಸಿ. ಅರ್ಹತೆ ಅವಶ್ಯಕತೆ ಇರುತ್ತದೆ. ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ ಇಟಗಿ ಅವರು ಹೆಚ್ಚಿನ ವಿದ್ಯಾರ್ಹತೆ ಹೊಂದಿದವರು ಉತ್ತಮ ಗುಣಮಟ್ಟದ ಕೆಲಸ ಮಾಡಲು ಉಪಯೋಗವಾಗುತ್ತದೆಂದು ಉತ್ತರಿಸಿದರು. ಸಹಾಯಕ ಸಿಬ್ಬಂದಿಯವರ ನೇಮಕಾತಿಯು ಕಟ್ಟುನಿಟ್ಟಾಗಿ ಚಾಲ್ತಿಯಲ್ಲಿರುವ ರೋಸ್ಟರ್ ನಿಯಮ ಹಾಗೂ ನೇಮಕಾತಿ ಪದ್ಧತಿಗಳ ಪ್ರಕಾರವೇ ಮಾಡಲಾಗಿದೆಯೆಂದು ಅಧ್ಯಕ್ಷರು ಘನ ವೇದಿಕೆಯ ಅವಗಾಹನೆಗೆ ತಂದರು. ನೇಮಕಾತಿ ಆದೇಶಗಳನ್ನು ಸಿಬ್ಬಂದಿಯವರ ಕೋರಿಕೆ ಮೇರೆಗೆ ವರ್ಗಾವಣೆಯ ನಂತರವೇ ಕೊಡಲಾಗುವುದೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಜಿ. ತಿಮ್ಮನಗೌಡ ಪಾಟೀಲ್ ಅವರು ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ನಡೆಯುವ ತರಬೇತಿಗಳ ಮಾಹಿತಿಯನ್ನು ಎಲ್ಲಾ ಸದಸ್ಯರುಗಳಿಗೆ ನೀಡಲು ವಿನಂತಿಸಿಕೊಂಡರು. ಇದರಿಂದಾಗಿ ಮಾನ್ಯ ಸದಸ್ಯರುಗಳಿಗೆ ಅವುಗಳಲ್ಲಿ ಪಾಲ್ಗೊಳ್ಳಲು ಅನುಕೂಲ ಮಾಡಿಕೊಳ್ಳಬಹುದು.

ಮಾನ್ಯ ಸದಸ್ಯರಾದ ಅಲ್ಲಮಪ್ರಭು ಪಾಟೀಲ ಅವರು ದ್ವಿದಳ ಧಾನ್ಯಗಳ ಹವಾಮಾನ ಬದಲಾವಣೆಗಳ ಅಧ್ಯಯನ ಕೈಗೊಳ್ಳಲು ಸಲಹೆ ನೀಡಿದರು. ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಐ.ಸಿ.ಎ.ಆರ್.ನ ಕೆಲವು ಹೊಸ ಸ್ಕೀಂಗಳು 12ನೇ ಯೋಜನೆಯಲ್ಲಿ ಪ್ರಾರಂಭಿಸಲು ಐ.ಸಿ.ಎ.ಆರ್. ಪರಿಗಣಿಸಿದೆಯೆಂದು ಅಧ್ಯಕ್ಷರು ತಿಳಿಸಿದರು.

ಮಾನ್ಯ ಅಧ್ಯಕ್ಷರು ಎಲ್ಲಾ ಸದಸ್ಯರುಗಳಿಗೆ ವಿನಂತಿಸುತ್ತಾ ಮುಂದಿನ ವ್ಯವಸ್ಥಾಪನಾ ಮಂಡಳಿಯ ಸಭೆಯನ್ನು ದಿನಾಂಕ 15ನೇ ಏಪ್ರೀಲ್ 2011 ರಂದು ಮದ್ಯಾಹ್ನ 3.00 ಗಂಟೆಗೆ ನಿಗದಿಪಡಿಸಿಲಾಗಿದ್ದು ಅದರಲ್ಲಿ ಭಾಗವಹಿಸಿ ತದನಂತರ ಕೃವಿವಿಯ ಮೊದಲನೆ ಘಟಿಕೋತ್ಸವದ ರಿಹರ್ಸಲ್ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕೃವಿವಿಯ ವತಿಯಿಂದ ಪದವಿ ಪಡೆಯುವರ ವಿದ್ಯಾರ್ಥಿಗಳಿಗೆ ನೀಡುವ ಹೈ-ಟಿಯನ್ನು ಸ್ವಿಕರಿಸುವುದು. ಮುಂದುವರೆದು ಮೊದಲನೆ ಘಟಿಕೋತ್ಸವವು ದಿನಾಂಕ: 16 ಎಪ್ರೀಲ್ 2011 ರಂದು ನಿಗದಿ ಪಡಿಸಲಾಗಿದ್ದು ಘನವೆತ್ತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು, ಮಾನ್ಯ ಕೃಷಿ ಸಚಿವರು ಹಾಗೂ ಉಪಕುಲಾಧಿಪತಿಗಳು, ಕರ್ನಾಟಕ ಸರ್ಕಾರ, ಮತ್ತು ಡಾ: ಎಸ್. ಅಯ್ಯಪ್ಪನ್, ಕಾರ್ಯದರ್ಶಿಗಳು DARE ಮತ್ತು ಡೈರಕ್ಟರ್ ಜನರಲ್, ಭಾರತ ಕೃಷಿ ಅನುಸಂಧಾನ ಪರಿಷತ್, ನವದೆಹಲಿರವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ/- (31-3-2011) | ಸಹಿ/- (31-3-2011) |
|---|---|
| **(ಬಿ.ವಿ. ಪಾಟೀಲ)** | **(ಪಿ. ಬಾಲಕೃಷ್ಣನ್)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

(ಪಿ. ಬಾಲಕೃಷ್ಣನ್)
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ

(3)